ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಅಧಿಕ ಜೆಎಂಎಫ್‌ಸಿ ನ್ಯಾಯಾಲಯ

ರಾಣೇಬೆನ್ನೂರು.

ಸಿ.ಸಿ.ಸಂಖ್ಯೆ: *891/*2025

ಪಿ ಡಬ್ಲ್ಯೂ: 1

ಸಿ ಡಬ್ಲ್ಯೂ: 1

| | | |
|---|---|---|
| ಸಾಕ್ಷಿಯ ಹೆಸರು | : | ಸೌಮ್ಯ ಹೊಸಮನಿ |
| ಗಂಡನ ಹೆಸರು | : | ಬಸವರಾಜ |
| ವಯಸ್ಸು | : | 30 |
| ಉದ್ಯೋಗ | : | ಮನೆ ಕೆಲಸ |
| ವಾಸಸ್ಥಳ | : | ರಾಣೆಬೆನ್ನೂರು |

ದಿನಾಂಕ: 09.02.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ಮೃತನು ನನ್ನ ತಮ್ಮನಾಗಬೇಕು. ದಿನಾಂಕ:08.06.2025 ರಂದು ರಾತ್ರಿ 8.45 ರ ಸುಮಾರಿಗೆ ರಾಣೆಬೆನ್ನೂರಿನ ಕರ್ನಾಟಕ ಸಾಮಿಲ್ ಬಳಿ ಟಿ.ವಿ.ಎಸ್. ಮೋಟರ್ ಸೈಕಲ್ ಬಂದು ನನ್ನ ತಮ್ಮನಿಗೆ ಅಪಘಾತ ಪಡಿಸಿದ್ದು, ಸದರಿ ವಾಹನದ ನೋಂದಣಿ ಸಂಖ್ಯೆ ನನಗೆ ನೆನಪಿಲ್ಲ. ಸದರಿ ಅಪಘಾತದ ಕುರಿತು ಚಾಸಾ 6 ರವರು ದೂರವಾಣಿಯ ಮೂಲಕ ನನಗೆ ಅಪಘಾತದ ಬಗ್ಗೆ ತಿಳಿಸಿರುತ್ತಾರೆ. ಮೃತನನ್ನು ರಾಣೆಬೆನ್ನೂರಿನ ಸರ್ಕಾರಿ ಆಸ್ಪತ್ರೇಗೆ ಚಿಕಿತ್ಸೆಗೆ ದಾಖಲಿಸಿರುದಾಗಿ ತಿಳಿಸಿರುತ್ತಾರೆ. ನಂತರ ನಾನು ಸರ್ಕಾರಿ ಆಸ್ಪತ್ರೇಗೆ ಹೋಗಿ ನೋಡಲಾಗಿ ಮೃತನ ತಲೆಗೆ ಮತ್ತು ಕೈ ಕಾಲುಗಳಿಗೆ ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ. ಆಸ್ಪತ್ರೇಯಲ್ಲಿ ಅಪಘಾತದ ಕುರಿತು ಚಾಸಾ 6 ರವರು ನನಗೆ ತಿಳಿಸಿರುತ್ತಾರೆ.

2. ಮುಂದುವರೆದ ಚಿಕಿತ್ಸೆಗಾಗಿ ದಾವಣಗೆರೆಯ ಆಸ್ಪತ್ರೇಗೆ ಕರೆದುಕೊಂಡು ಹೋಗಿದ್ದು ಆಸ್ಪತ್ರೇಯ ಹೆಸರು ನನಗೆ ನೆನಪಿಲ್ಲ. ಸಾಕ್ಷಿಯು ಮುಂದುವರೆದು ಎಸ್. ಎಸ್. ಆಸ್ಪತ್ರೇಗೆ ಕರೆದುಕೊಂಡು ಹೋಗಿರುವುದಾಗಿ ನುಡಿಯುತ್ತಾರೆ. ಅಪಘಾತವು ಮೋಟರ್ ಸೈಕಲ್ ಚಾಲಕನ ತಪ್ಪಿನಿಂದ ಆಗಿದ್ದು ಆತನ ಹೆಸರು ಮಾಲತೇಶ ಆಗಿರುತ್ತದೆ. ದಾವಣಗೆರೆ ಆಸ್ಪತ್ರೇಯಿಂದ ಬಂದು ದಿನಾಂಕ: 09.06.2025 ರಂದು ಪಿರ್ಯಾದಿ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ಸದರಿ ಪಿರ್ಯಾದಿ ಮತ್ತು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ

ಪಿರ್ಯಾದಿಯನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

3. ಕೇವಲ ಒಂದು ದಿನ ಚಿಕಿತ್ಸೆ ಪಡೆದಿದ್ದು ನಂತರ ದಾವಣಗೆರೆ ಆಸ್ಪತ್ರೇಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ದಿನಾಂಕಃ10.06.2025 ರಂದು ನನ್ನ ತಮ್ಮ ಮರಣ ಹೊಂದಿರುತ್ತಾನೆ. ಆ ಕುರಿತು ಪಿರ್ಯಾದಿ ಠಾಣೆಯಲ್ಲಿ ಪುರವಣಿ ಹೇಳಿಕೆ ನೀಡಿರುತ್ತೇನೆ. ಚಾಸಾ 6 ರವರ ಜೊತೆ ಇದ್ದ ಇತರ ವ್ಯಕ್ತಿಗಳ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಚಾಸಾ 8 ಮತ್ತು 9 ರ ಬಗ್ಗೆ ಗೊತ್ತಿಲ್ಲ.

**ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು**

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

ಅಪಘಾತದ ಸಮಯದಲ್ಲಿ ಚಾಸಾ 6 ರವರ ಜೊತೆ ಚಾಸಾ 7 ರವರು ಇದ್ದರು ಎಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ಅಪಘಾತ ಪಡಿಸಿದ ಮೋಟರ್ ಸೈಕಲ್ ನೊಂದಣಿ ಸಂಖ್ಯೆಕೆಎ 17/ಎಚ್. ಎಮ್.9699 ಆಗಿರುತ್ತದೆ ಎಂದರೆ ಸರಿ. ಸದರಿ ಅಪಘಾತ ಪಡಿಸಿದ ವಾಹನದ ಚಾಲಕನ ಹೇಸರು ಲಕ್ಷ್ಮೀಕಾಂತ ತಂದೆ ನರಸಪ್ಪ ಎಂದರೆ ಸರಿ. ಸದರಿ ಅಪಘಾತ ಪಡಿಸಿದ ಮೋಟರ್ ಸೈಕಲ್ ನಲ್ಲಿ ಚಾಸಾ 8 ಮತ್ತು 9 ರವರು ಸಹ ಇದ್ದರು ಎಂದರೆ ಸರಿ. ಚಾಸಾ 9 ರವರಿಗೆ ಸಹ ಸಣ್ಣ ಪುಟ್ಟ ಗಾಯಗಳಾಗಿರುವುದಾಗಿ ಚಾಸಾ 6 ರವರು ತಿಳಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಚಾಸಾ 6 ನನಗೆ ಸಂಬಂಧದಲ್ಲಿ ದೊಡ್ಡಪ್ಪನಾಗಬೇಕು. ನಾನು ಡಿಗ್ರಿ ಪದವಿಧರೆ ಆಗಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಆ ಕಾರಣ ನನಗೆ ಪಿರ್ಯಾದಿಯನ್ನು ನಾನೇ ಬರೆದು ಕೊಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನಿಪಿ-1 ರ ಪಿರ್ಯಾದಿಯನ್ನು ನಾನು ಎಲ್ಲಿ ಗಣಕೀಕೃತ ಗೊಳಿಸಿರುತ್ತೇನೆ ಎಂದು ಹೇಳಲು ಆಗುವುದಿಲ್ಲ. ಪೋಲೀಸ ಠಾಣೆಯಲ್ಲಿ ಗಣಕೀಕೃತಗೊಳಿಸಿ ಇಟ್ಟಿದ್ದ ದಾಖಲೆಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಆ ಕಾರಣ ನನಗೆ ಪಿರ್ಯಾದಿಯಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

2. ನಿಪಿ-1 ರ ನಂತರ ನನ್ನ ತಮ್ಮ ಮರಣಹೊಂದಿದ ನಂತರ ಪೋಲಿಸ ಠಾಣೆಗೆ ಹೋಗಿರುತ್ತೇನೆ. ಆ ಸಮಯದಲ್ಲಿ ಆತನು ಮರಣ ಹೊಂದಿರುವ ಬಗ್ಗೆ ಮಾಹಿತಿ ನೀಡಿ ಸಹಿ ಮಾಡಿ ಬಂದಿರುತ್ತೇನೆ. ಚಾಸಾ 6 ರವರು ನೀಡಿದ ಮಾಹಿತಿಯ ಆಧಾರದ ಮೇಲೆ ಪಿರ್ಯಾದಿ ತಯಾರಿಸಿದ್ದು ಅದಕ್ಕೆ ನಾನು ಸಹಿ ಮಾಡಿದ್ದು ಆ ಕಾರಣ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಸ್ವಲ್ಪ ಮಾಹಿತಿ ಇರುವುದಾಗಿ ನುಡಿಯುತ್ತಾರೆ.

3. ಹಲಗೇರಿ ರಸ್ತೆಯಲ್ಲಿ ನಾವು ನಮ್ಮ ಮನೆ ಮತ್ತು ಊರಿಗೆ ಓಡಾಡುವ ರಸ್ತೆ ಆಗಿರುತ್ತದೆ

ಎಂದರೆ ಸರಿ. ಸದರಿ ರಸ್ತೆಯು ಡಬಲ್ ರಸ್ತೆ ಆಗಿರುತ್ತದೆ ಎಂದರೆ ಸರಿ. ದೇವಿಕಾ ಶಾಲೆಯ ರಸ್ತೆಯಿಂದ ಸರ್ಕಾರಿ ಆಸ್ಪತ್ರೇಯವರೆಗೂ ರಸ್ತೆಯು ಏರುಮುಖವಾಗಿರುತ್ತದೆ ಎಂದರೆ ಸರಿ. ನಾನು ಅಪಘಾತವಾದ ಗುನ್ನಾ ಜಾಗವನ್ನು ನೋಡಿರುತ್ತೇನೆ. ಸದರಿ ಗುನ್ನಾ ಜಾಗ ದೇವಿಕಾ ಶಾಲೆಯ ರಸ್ತೆಯಿಂದ ಎಷ್ಟು ಅಡಿ ಅಂತರದಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಗುನ್ನಾ ಜಾಗದ ಎರಡು ಬದಿ 10 ಅಡಿ ಅಗಲದ ಪೂಟ್ ಪಾತ್ ರಸ್ತೆ ಇದೆ ಎಂದರೆ ಸರಿ. ಸಾಮಾನ್ಯವಾಗಿ ಸದರಿ ಪೂಟ್ ಪಾತ್ ನಲ್ಲಿ ಜನ ಓಡಾಡುತ್ತಾರೆ ಎಂದರೆ ಸರಿ. ಅಪಘಾತವು ಕರ್ನಾಟಕ ಸಾಮಿಲ್ ಮುಂಭಾಗ ಆಗಿರುತ್ತದೆ. ನನ್ನ ಪಿರ್ಯಾದಿಯಲ್ಲಿ ಗಣೇಶ ಸಾಮಿಲ್ ಎಂದು ಬರೆಸಿರುತ್ತೇನೆ. ಆದರೆ ಅಪಘಾತವು ಕರ್ನಾಟಕ ಸಾಮಿಲ್ ಬಳಿ ಆಗಿರುತ್ತದೆ.

4. ಸದರಿ ಸಾಮಿಲ್ ನ ಬಗ್ಗೆ ಚಾಸಾ 6 ರವರು ಹೇಳಿದ್ದ ಕಾರಣ ಬರೆಸಿರುತ್ತೇನೆ ಎಂದರೆ ಸರಿ. ಆ ಕಾರಣ ನನಗೆ ಅಪಘಾತದ ಕುರಿತು ಯಾವುದೇ ವೈಯಕ್ತಿಕ ಮಾಹಿತಿ ಇಲ್ಲದಿದ್ದರೂ ಸಹ ಚಾಸಾ 6 ರವರು ಹೇಳಿದಂತೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗುನ್ನಾ ಜಾಗದ ರಸ್ತೆ ಏರುಮುಖದ ರಸ್ತೆ ಆಗಿರುವ ಕಾರಣ ವಾಹನಗಳು ನಿಧಾನವಾಗಿ ಓಡಾಡುತ್ತವೆ ಎಂದರೆ ಸರಿ. ಆರೋಪಿಯು ತನ್ನ ವಾಹನವನ್ನು ಕಾನೂನು ಬದ್ದವಾಗಿ ಎಡಭಾಗದಲ್ಲಿ ವಾಹನವನ್ನು ಚಾಲನೆ ಮಾಡಿಕೊಂಡು ಹೋಗುತ್ತಿದ್ದು ಮೃತನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸಾಕ್ಷಿಯು ಆರೋಪಿಯು ಬೈಕಿನಲ್ಲಿ 3 ಜನ ಹೋಗುತ್ತಿದ್ದು ಅಪಘಾತ ಆಗಿರುತ್ತದೆ ಎಂದು ನುಡಿಯುತ್ತಾರೆ. ಆ ಬಗ್ಗೆ ಚಾಸಾ 6 ರವರು ಹೇಳಿದಂತೆ ತಿಳಿದುಕೊಂಡಿರುತ್ತೇನೆ ಎಂದರೆ ಸರಿ.

5. ಗುನ್ನಾ ಜಾಗದ ಪಂಚನಾಮೆಯ ಜೊತೆ ಹಾಜರುಪಡಿಸಿರುವ ಪೋಟೋದಲ್ಲಿ ಕಾಣಿಸುವ ಎಡಭಾಗದ ನೀಲಿ ಬಣ್ಣದ ಅಂಗಿ ಧರಿಸಿರುವ ವ್ಯಕ್ತಿಯು ಚಾಸಾ 6 ಆಗಿರುತ್ತಾರೆ. ಸದರಿ ಪೋಟೋದಂತೆ ರಸ್ತೆಯ ಎಡ ಭಾಗದ ಅಂಚಿನಲ್ಲಿ ಅಪಘಾತ ಆಗಿರುವುದಾಗಿ ತೋರಿಸಲಾಗಿದೆ ಎಂದರೆ ಸರಿ. ಸದರಿ ಅಂಚಿನಿಂದ ಅಂದಾಜು 15 ಅಡಿ ಪೂಟ್ ಪಾತ್ ರಸ್ತೆ ಇದೆ ಎಂದರೆ ಸರಿ. ಸದರಿ ಪೋಟೋದಲ್ಲಿ ಕಾಣುವಂತೆ ರಸ್ತೆಯು ಏರುಮುಖವಾಗಿದೆ ಎಂದರೆ ಸರಿ. ಆ ಕಾರಣ ನನ್ನ ತಮ್ಮನೆ ರಸ್ತೆಗೆ ಅಡ್ಡ ಬಂದು ಅಪಘಾತವಾಗಿದ್ದು ಆರೋಪಿಯು ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ನಾನು ಚಾಸಾ 6 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು.

ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಅಧಿಕ ಜೆಎಂಎಫ್‌ಸಿ ನ್ಯಾಯಾಲಯ

ರಾಣೇಬೆನ್ನೂರು.

ಸಿ.ಸಿ.ಸಂಖ್ಯೆಃ *891/*2025

ಪಿ ಡಬ್ಲ್ಯೂಃ 3

ಸಿ ಡಬ್ಲ್ಯೂಃ 2

| | | |
|---|---|---|
| ಸಾಕ್ಷಿಯ ಹೆಸರು | : | ಚನ್ನಬಸಪ್ಪ ಮಾಕನೂರ |
| ಗಂಡನ ಹೆಸರು | : | ಶಿವಪುತ್ರಪ್ಪ |
| ವಯಸ್ಸು | : | 27 |
| ಉದ್ಯೋಗ | : | ಖಾಸಗಿ ಕೆಲಸ |
| ವಾಸಸ್ಥಳ | : | ರಾಣೆಬೆನ್ನೂರು |

ದಿನಾಂಕಃ 09.02.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ಸಾಕ್ಷಿಗೆ ಗುನ್ನಾ ಜಾಗದ ಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿಪಿ–2 ಎಂದು ಮತ್ತು ಸಾಕ್ಷಿಯ ಸಹಿಯನ್ನು 2 ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಮಧ್ಯಾಹ್ನ 2.30 ರ ಸುಮಾರಿಗೆ ಹಲಗೇರಿ ರಸ್ತೆಯ ಸಾಮಿಲ್ ಬಳಿ ಮಾಡಿರುತ್ತೇನೆ. ಸದರಿ ಗುನ್ನಾ ಜಾಗವನ್ನು ಚಾಸಾ 6 ರವರು ತೋರಿಸಿರುತ್ತಾರೆ. ಪಂಚನಾಮೆಯ ಸಮಯದಲ್ಲಿ ನನ್ನ ಜೋತೆ ಚಾಸಾ 2 ರವರು ಹಾಜರಿದ್ದರು. ಪಂಚನಾಮೆಯ ಸಮಯದಲ್ಲಿ ನಮ್ಮ ಸಮಕ್ಷಮ ಪೋಟೋ ತೆಗೆದುಕೊಂಡಿರುತ್ತಾರೆ. ಸಾಕ್ಷಿಯು ಸದರಿ ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ–3 ರಿಂದ 6 ಎಂದು ಕಲಂ 65(ಬಿ) ಅಡಿ ರುಜುವಾತು ಪಡಿಸುವ ಹೋಣೆಗಾರಿಕೆಗೆ ಒಳಪಟ್ಟು ಗುರುತಿಸಲಾಯಿತು.

2. ನಂತರ ಅದೇ ದಿನ ಮಧ್ಯಾಹ್ನ 3.15 ಕ್ಕೆ ಪೋಲಿಸ ಠಾಣೆಗೆ ಹೋಗಿ ಅಪಘಾತಕ್ಕೆ ಒಳಪಟ್ಟ ವಾಹನವನ್ನು ಚಾಸಾ 6 ರವರು ತೋರಿಸಿರುವಂತೆ ನನ್ನ ಸಮಕ್ಷಮ ಜಪ್ತಿ ಪಂಚನಾಮೆಯನ್ನು ತಯಾರಿಸಿರುತ್ತಾರೆ. ಸಾಕ್ಷಿಯು ಸದರಿ ಪಂಚನಾಮೆ ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು, ಜಪ್ತಿ ಪಂಚನಾಮೆಯನ್ನು ನಿಪಿ–7 ಮತ್ತು ಸಾಕ್ಷಿಯ ಸಹಿಯನ್ನು ನಿಪಿ–7 ಎ ಎಂದು ಗುರುತಿಸಲಾಯಿತು. ನಂತರ ಪಂಚನಾಮೆಯ ಸಮಯದಲ್ಲಿ ನಮ್ಮ ಪೋಟೋ ತೆಗೆದುಕೊಂಡಿರುತ್ತಾರೆ, ಸಾಕ್ಷಿಯು ಸದರಿ 2 ಪೋಟೋಗಳನ್ನು ನೋಡಿ ಗುರುತಿಸಿದ್ದು

ಅವುಗಳನ್ನು ನಿಪ–8 ಮತ್ತು 9 ಎಂದು ರುಜುವಾತು ಪಡಿಸುವ ಹೊಣೆಗಾರಿಕೆಗೆ ಒಳಪಟ್ಟು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಚಾಸಾ 6 ರವರು ನಮ್ಮ ನೆರೆಹೊರೆಯವರಾಗಿರುತ್ತಾರೆ. ಅಪಘಾತದ ಪಂಚನಾಮೆಗೆ ನನ್ನನ್ನು ಯಾರು ಕರೆದಿರುವುದಿಲ್ಲ ಆದರೆ ನಾನೇ ಹೋಗಿರುತ್ತೇನೆ. ಚಾಸಾ 6 ರವರು ಪರಿಚಯಸ್ತ ಇದ್ದ ಕಾರಣ ನಾನು ಪಂಚನಾಮೆಗೆ ಭಾಗಿಯಾಗಿರುತ್ತೇನೆ. ಪಂಚನಾಮೆಯನ್ನು ಪೋಲಿಸರು ಬರದುಕೊಂಡಿರುತ್ತಾರೆ. ಸದರಿ ಪಂಚನಾಮೆಯಲ್ಲಿ ಚಾಸಾ 6 ರವರು ಪ್ರತ್ಯಕ್ಷ ಸಾಕ್ಷಿ ಇದ್ದ ಕುರಿತು ಬರೆದುಕೊಂಡಿರುತ್ತಾರೆ. ಆ ಕಾರಣ ನನಗೆ ಸಹಿ ಮಾಡಲು ಹೇಳಿದ್ದು, ಸಹಿ ಮಾಡಿರುತ್ತೇನೆ ಎಂದರೆ ಸರಿ. ಅದನ್ನು ಹೊರತು ಪಡಿಸಿ ಬೇರೆ ಯಾವ ಕಾರಣಕ್ಕೆ ಪಂಚನಾಮೆ ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು

ರಾಣೇಬೆನ್ನೂರು.